ಹಂಬಲಿಸಿ ಹಂಬಲಿಸಿ ಅಪರೂಪಕ್ಕೆ ಹುಟ್ಟಿದ ಏಕಮಾತ್ರ ಸಂತಾನ. ಮಕ್ಕಳಿಲ್ಲವೆಂಬ ದಶಕಗಳ ಕೊರಗನ್ನು ನೀಗಿದ ವಂಶೋದ್ಧಾರಕ. ಅರಗಿಣಿಯಂತೆ ಮಗನನ್ನು ಸಾಕಿಕೊಂಡಿದ್ದರು ಫಣಿಯಮ್ಮ. ಅತಿ ಮುದ್ದಿನಿಂದ ತಿನ್ನಿಸಿ, ಉಣ್ಣಿಸಿ ದಿವಿನಾಗಿ ಸಾಕಿಕೊಂಡಿದ್ದ ಮಗ ವಿದ್ಯೆ ತಲೆಗೆ ಹತ್ತದೆ ಉಂಡಾಡಿಗುಂಡನ ಹಾಗೆ ಬೆಳೆದರೆ ತಪ್ಪು ಅವನದ್ದಾ, ಅವನ ಅಮ್ಮನದ್ದಾ ಅಥವಾ ತಮ್ಮದೇನಾ ಗೊತ್ತಾಗದ ಗೊಂದಲ ಶಾಸ್ತ್ರಿಗಳಿಗೆ. 'ವಿದ್ಯೆ ನೈವೇದ್ಯವಾದರೆ ಬಿಟ್ಟು ಹೋಗಲಿ. ಒಂದಿಷ್ಟು ಮಂತ್ರ, ತಂತ್ರ ಕಲಿತು ಹೊಟ್ಟೆ ಹೊರೆಯೋ ದಾರಿ ಕಂಡುಕೊಳ್ಳಲಿ' ಎಂದು ಶಾಸ್ತ್ರಿಗಳು ಬಲವಂತವಾಗಿ ಮಗನನ್ನು ಕೂರಿಸಿಕೊಂಡು ತಮಗೆ ಗೊತ್ತಿದ್ದ ಪೂಜೆ, ವ್ರತಕತೆಯ ಮಂತ್ರಗಳನ್ನು ಅರೆದು ಹುಯ್ಯಲು ಪ್ರಯತ್ನಿಸಿದರು. ಎಸ್ಸೆಸ್ಸೆಲ್ಸಿಯವರೆಗೆ ಹಾಗೂ ಹೀಗೂ ದೂಕಿಸಿಕೊಂಡು ಬಂದ ವಿಶ್ವೇಶ್ವರನ ಗಾಡಿ ಅಲ್ಲಿಗೆ ಕೆಟ್ಟು ನಿಂತು ಹೋಯ್ತು. ಅಪ್ಪನ ಹಟದಿಂದ ಒಂದಿಷ್ಟು ಮಂತ್ರ ಕಂಠಸ್ಥವಾಗಿತ್ತು. ಎಲ್ಲಿಗೆ ಹೋಗಬೇಕಾದರೂ ಜೊತೆಗೆ ಮಗನನ್ನು ಕರೆದುಕೊಂಡು ಹೋಗುವುದನ್ನು ರೂಢಿಸಿಕೊಂಡರು ಶಾಸ್ತ್ರಿಗಳು. ಅಪ್ಪನಿಗೆ ಜೊತೆ ಕೊಡುವ ವಿಚಾರಕ್ಕಿಂತಲೂ ಹೀಗೆ ಹೋದ ಕಡೆ ಹೊಟ್ಟೆ ಬಿರಿ ಭಕ್ಷ್ಯಭೋಜ್ಯಗಳನ್ನು ಲಗಾಯಿಸಬಹುದೆಂಬ ಪ್ರಲೋಭನೆ ವಿಶ್ವೇಶ್ವರನನ್ನು ಅಪ್ಪನೊಡನೆ ಹೊರಡಲು ಪ್ರೇರೇಪಿಸುತ್ತಿದೆಯೆಂದು ಶಾಸ್ತ್ರಿಗಳ ಸೀಮಿತ ತಿಳಿವಳಿಕೆ. ಮಕ್ಕಳು ಎಷ್ಟೇ ದೊಡ್ಡವರಾದರೂ ಹೆತ್ತವರ ಕಣ್ಣಲ್ಲಿ ಸಣ್ಣವರೇ. ಅವರು ಮಕ್ಕಳನ್ನು ಅರ್ಥೈಸಿಕೊಳ್ಳುವ ಪರಿಯೇ ಬೇರೆ. ವಿಶ್ವೇಶ್ವರನಿಗೆ ಹೋದ ಕಡೆಗಳಲ್ಲೆಲ್ಲಾ ಸಮೀಚೀನ ಭೋಜನಕ್ಕಿಂತಾ ಅಂತಲ್ಲಿ ಓಡಾಡುವ ಪ್ರಾಯದ ಹುಡುಗಿಯರ ಮೇಲೆ ಚಪಲ ಹೆಚ್ಚು ಎಂಬುದು ಕ್ರಮೇಣ ಶಾಸ್ತ್ರಿಗಳ ಗಮನಕ್ಕೆ ಬಂತು. ಶಾಸ್ತ್ರಿಗಳೇನು ದಡ್ಡರಲ್ಲ. ಲೋಕಾನುಭವ ಇಲ್ಲದವರಲ್ಲ. ಪ್ರಾಯದ ಆಟ ಗೊತ್ತಿಲ್ಲದವರಲ್ಲ. 'ಕುತ್ತಿಗೆಗೊಂದು ಕುಂಟೆ ಕಟ್ಟಿದರೆ ಮಗ ತಾನಾಗಿ ಹಾದಿಗೆ ಬರುತ್ತಾನೆ' ಎಂದು ಸಹಜವಾಗಿ ಅವರಿಗೆ ಅನ್ನಿಸಿಬಿಟ್ಟಿತು. "ಮನೆಗೆ ಸೊಸೆ ತರೋದು ಬೇಡ್ವೇನೇ?" ಎನ್ನುತ್ತಾ ಪತ್ನಿಯೊಂದಿಗೆ ಮಂತ್ರಾಲೋಚನೆಗೆ ತೊಡಗಿದಾಗ ವಿಶ್ವೇಶ್ವರನಿಗೆ ಇನ್ನೂ ಇಪ್ಪತ್ತೆರಡು.



★★★

ಅಂದುಕೊಂಡಷ್ಟು ಸಲೀಸಾಗಿ ಕೈಗೂಡಲಿಲ್ಲ ಇಚ್ಛಿತ ಕಾರ್ಯ. ತಲೇಮೇಲೊಂದು ಸೂರು, ಮುಕ್ಕಾಲೆಕರೆ ಅಡಿಕೆತೋಟ ಬಿಟ್ಟರೆ ಅವರದ್ದು ಎನ್ನುವ ಅಷ್ಟೈಶ್ವರ್ಯ ಮತ್ತೇನಿರಲಿಲ್ಲ. ತೋಟದ ಆದಾಯ ನಂಬಿಕೊಳ್ಳದೆ ಶಾಸ್ತ್ರಿಗಳು ಬೇರೆ ದಿಕ್ಕು ಕಂಡುಕೊಂಡಿದ್ದರಿಂದ ಹಾಲು, ತುಪ್ಪದಲ್ಲಿ ಕೈ ತೊಳೆಯದಿದ್ದರೂ ಸಮೃದ್ಧಿಯಾಗಿ ಉಂಡುಡಲು ಆ ಮನೆಯಲ್ಲಿ ಕೊರತೆ ಇರಲಿಲ್ಲ. ಮಗ ತನ್ನ ಹೆಜ್ಜೆಗುರುತುಗಳನ್ನು ಅನುಸರಿಸಿ ನಡೆದರೆ ಅವನೂ ಸುಖವಾಗಿ ಬಾಳುತ್ತಾನೆ ಎಂದು ಶಾಸ್ತ್ರಿಗಳ ಕನವರಿಕೆ. ಕೊಂಚ ಅನುಕೂಲಸ್ಥರ ಮನೆಯ ಹುಡುಗಿ, ಚಿನ್ನಗಿನ್ನ ಹಾಕಿ ಕನ್ಯಾದಾನ ಮಾಡಿಕೊಡುವಂತವರ ಮನೆಯವರು ಸಿಗಲಿ ಎಂದು ಫಣಿಯಮ್ಮನಿಗೆ ಕುತ್ತಿಗೆಯವರೆಗೆ ಆಸೆ. ಕೊನೆಗೂ ಅವನ ಹಣೆಯಲ್ಲಿ ವಿಧಿ ಬರೆದ ಜೋಡಿ ಗುಂಡಮ್ಮ. ನತದೃಷ್ಟದ ಹುಡುಗಿ ಗುಂಡಿ. ಎರಡನೇ ಹೆರಿಗೆಯಲ್ಲಿ ಕೂಸು ಹೊಟ್ಟೆಯೊಳಗಿದ್ದಂತೆಯೇ ಅಮ್ಮ ತೀರಿಕೊಂಡು ಮುಂದೆ ಮಲತಾಯಿಯ ನೆರಳಲ್ಲಿ ಬೆಳೆದವಳು ಗುಂಡಿ. ಚಿಕ್ಕಿಯ ಇಬ್ಬರು ಮಕ್ಕಳ ಸೇವೆ ಮಾಡುತ್ತಾ, ಮನೆಗೆಲಸದಲ್ಲಿ ನುರಿಯುತ್ತಾ, ಪ್ರೈಮರಿ ಮುಗಿಸುವಷ್ಟಕ್ಕೆ ಕೈದಾಯ್ತು ಓದು. ಅಪ್ಪ ಬಾಯಿ ಸತ್ತ ಮನುಷ್ಯ. "ಮೇಲಿಂದ ಕೆಳಗಿನವರೆಗೂ ಒಂದೇ ಸಮ ಕಡುಬಿನ ಕೊಟ್ಟೆ ಹಂಗಿದೆ. ನಮಗೆ ಬೇರೆ ವಿಧಿಯಿಲ್ಲಾಂತಾದ್ರೆ ಒಪ್ಗಂಬೇಕು, ಅಷ್ಟೇ..." ಕುಂಯ್ಗುಟ್ಟಿದ್ದರು ಫಣಿಯಮ್ಮ, ಮದುವೆ ನಿಶ್ಚಯವಾಗುವ ಹಂತಕ್ಕೆ ಬಂದಾಗ.

"ಎಂತೆಂತೋರ ಮನೇಲೇ ಬೆಳೆದ ಹುಡುಗರು ಹೆಣ್ಣು ಸಿಗದೆ ಕಂಗಾಲಾಗಿದಾರೆ. ನಿನ್ನ ಮಗನ